ದಿನಾಂಕಃ 31-3-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.
ಪ್ರತಿವಾದಿ ಪರ ಪಾಟೀ ಸವಾಲು ಶ್ರೀ ಎಸ್.ಆರ್.ಎನ್. ವಕೀಲರಿಂದಃ-

ವಂಶಪಾರಂಪರಿಕವಾಗಿ ಎಷ್ಟು ವರುಷಗಳಿಂದ ಸಾಗುವಳಿ ಮಾಡುತ್ತಾ ಬಂದಿದ್ದೀರಾ ಎಂದರೆ ಸಾಕ್ಷಿ ಸುಮಾರು 100 ವರುಷಗಳಿಂದ ಸಾಗುವಳಿ ಮಾಡುತ್ತಾ ಬಂದಿದ್ದೇವೆ ಎಂದು ಹೇಳುತ್ತಾರೆ. ನೀವು ಅನಕ್ಷರಸ್ಥರು ಎಂದು ಹೇಳುತ್ತೀರಿ ನಿಮಗೆ ಅರ್ಜಿ ಹಾಕಲು ಯಾರು ಹೇಳಿದರು ಎಂದರೆ ಊರಿನಲ್ಲಿ ಪ್ರಚಾರ ಮಾಡುತ್ತಿದ್ದರಿಂದ ವಿಷಯ ಗೊತ್ತಾಗಿ ನಾನು ಅರ್ಜಿ ಹಾಕಿರುತ್ತೇನೆ. ಅರ್ಜಿಯನ್ನು ನಿಮಗೆ ಯಾರು ಬರೆದುಕೊಟ್ಟರು ಎಂದರೆ ಸಾಕ್ಷಿಯು ಊರಿನ ಮೆಂಬರ್ ಓಂಕಾರಿನಾಯ್ಕು ಎನ್ನುವವರು ಬರೆದುಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ನಾವು ಮೊದಲಿನಿಂದ ದಾವಾ ಆಸ್ತಿಯನ್ನು ಸಾಗುವಳಿ ಮಾಡುತ್ತಾ ಬಂದಿದ್ದರೆ ಸದರಿ ಸಮಯದಲ್ಲಿ ಗ್ರಾಮ ಪಂಚಾಯಿತಿ ಅರಣ್ಯ ಹಕ್ಕು ಸಮಿತಿಗೆ ಮೊದಲು ಅರ್ಜಿ ನೀಡುತ್ತಿದ್ದೆವು ಆದರೆ ನೀಡಿಲ್ಲ ಎಂದರೆ ಸಾಕ್ಷಿಯು ಆವಾಗ ಯಾರೂ ಅರ್ಜಿ ನೀಡಬೇಕು ಎಂದು ಹೇಳಿರಲಿಲ್ಲ ಆದ್ದರಿಂದ ನಾವು ಅರ್ಜಿಯನ್ನು ಹಾಕಿರಲಿಲ್ಲ ಎಂದು ಹೇಳುತ್ತಾರೆ. ಸರ್ವೆ ಮಾಡಲು ಎಲ್ಲಿ ಬಂದಿದ್ದರು ಎಂದರೆ ಸಾಕ್ಷಿಯು ಸರ್ವೆ ನಂ 72 ರಲ್ಲಿ ಸರ್ವೆ ಮಾಡಲು ಬಂದಿದ್ದರು , ಆದರೆ ಸರ್ವೆ ಮಾಡಲು ನಾವು ಬಿಡಲಿಲ್ಲ ಏಕೆಂದರೆ ಅದು ನಾವು ಸಾಗುವಳಿ ಮಾಡುವ ಜಮೀನು ಆಗಿತ್ತು ಎಂದು ಹೇಳುತ್ತಾರೆ. ದಾವಾ ಆಸ್ತಿಯು ನಮ್ಮ ಜಮೀನು ಆಗಿರುವುದಿಲ್ಲ ಅದು ಪ್ರತಿವಾದಿ ಜಮೀನು ಎಂದರೆ ಸರಿಯಲ್ಲ. ಇಬ್ಬರು ವ್ಯಕ್ತಿಗಳು ಗ್ರಾಮ ಹಕ್ಕು ಅರಣ್ಯ ಸಮಿತಿಯಿಂದ ಸರ್ವೆ ಮಾಡಲು ಬಂದಿದ್ದರು , ಆದರೆ ಅವರ ಹೆಸರು ಗೊತ್ತಿಲ್ಲ.

2. ನಿಮ್ಮ ಮೂರು ತಲೆಮಾರನ್ನು ಕಂಡಂತಹ ಹಿರಿಯರು ಯಾರು ಎಂದರೆ ಸಾಕ್ಷಿಯು ಸೋಮ್ಲಾನಾಯ್ಕುರು , ವಾಲ್ಯಾನಾಯ್ಕು , ಹೊಲ್ಯಾನಾಯ್ಕು ಎಂಬುವರು ನಮ್ಮ ತಲೆ

ಮಾರಿನವರಾಗಿರುತ್ತಾರೆ. ಸೋಮ್ಲಾನಾಯ್ಕರು , ವಾಲ್ಯಾನಾಯ್ಕ , ಹೊಲ್ಯಾನಾಯ್ಕ ಎಂಬುವರು ನಮ್ಮ ತಲೆ ಮಾರಿನವರು ಅಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ದಾವಾ ಸ್ವತ್ತಿನ ಅಕ್ಕಪಕ್ಕಕ್ಕೆ ಯಾರು ಯಾರು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಪೂರ್ವಕ್ಕೆ ಸೋಮ್ಲಾನಾಯ್ಕರ ಜಮೀನು , ಪಶ್ಚಿಮಕ್ಕೆ ನನ್ನ ಮಾವನಾದ ಸಕ್ರಾನಾಯ್ಕರ ಜಮೀನು , ಉತ್ತರಕ್ಕೆ ಸೊಲ್ಲಪ್ಪರವರ ಜಮೀನು , ದಕ್ಷಿಣಕ್ಕೆ ರಸ್ತೆ ಇರುತ್ತದೆ.

4. 1 ನೇ ಪ್ರತಿವಾದಿಯ ಜಮೀನಿನ ಚಕ್ಕುಬಂದಿ ಏನು ಇರುತ್ತದೆ ಎಂದರೆ ಪೂರ್ವಕ್ಕೆ ನನ್ನ ಜಮೀನು , ಪಶ್ಚಿಮಕ್ಕೆ ಮಾದರ ಜಮೀನು , ಉತ್ತರಕ್ಕೆ - ರಸ್ತೆ , ದಕ್ಷಿಣಕ್ಕೆ ಸೊಲ್ಲಪ್ಪರವರ ಜಮೀನು ಬರುತ್ತದೆ. ದಿನಾಂಕ 17-4-2016 ರಂದು ಬೆಳಗ್ಗೆ 10 ಗಂಟೆಗೆ ಪ್ರತಿವಾದಿಯರು ಅಕ್ರಮ ಪ್ರವೇಶ ಮಾಡಿದಾಗ ನೀವು ಎಲ್ಲಿ ಇದ್ದಿರಿ ಎಂದರೆ ನಾವು ಮನೆಯಲ್ಲಿ ಇದ್ದೆವು ಆಗ ಊರಿನವರು ನಮಗೆ ಹೇಳಿದ್ದರಿಂದ ನಾವು ನಮ್ಮ ಜಮೀನಿಗೆ ಹೋಗಿ ಸರ್ವೆ ಮಾಡುವುದನ್ನು ನಿಲ್ಲಿಸಿದೆವು . ಮತ್ತು ನಮ್ಮ ಮೇಲೆ 2 ನೇ ಪ್ರತಿವಾದಿಯ ಅಳಿಯ ಜಗಳ ಮಾಡಲು ಬಂದನು. ಸದರಿ ಸಮಯದಲ್ಲಿ ಎಷ್ಟು ಜನರು ಇದ್ದರು ಎಂದರೆ 4 ಜನರು ಇದ್ದರು. ಅವರ ಹೆಸರು ಏನು ಎಂದರೆ 2 ನೇ ಪ್ರತಿವಾದಿ , ಅವನ ಹೆಂಡತಿ , ಹಾಗೂ ಉಳಿದ ಇಬ್ಬರು 2 ನೇ ಪ್ರತಿವಾದಿಯ ಅಳಿಯಂದಿರು ಇರುತ್ತಾರೆ ಅವರ ಹೆಸರು ಗೊತ್ತಿಲ್ಲ . ಬೇರೆಯವರು ಯಾರು ಇದ್ದರು ಎಂದರೆ ಸಾಕ್ಷಿಯು ಅಕ್ಕಪಕ್ಕ ಜಮೀನಿನವರಾದ ಸೋಮ್ಲಾನಾಯ್ಕ , ಗಂಗಾನಾಯ್ಕ , ವಾಲ್ಯಾನಾಯ್ಕ ಇವರು ಇದ್ದರು. ಹಾಗೂ ನಮ್ಮ ತಾಯಿಯ ಅಕ್ಕನ ಮಕ್ಕಳಾದ ಸುರೇಶನಾಯ್ಕ, ಶೀನಾನಾಯ್ಕ ಇದ್ದರು. ಪ್ರತಿವಾದಿಯರು ಯಾರೂ ಬಂದಿರಲಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸೋಮ್ಲಾನಾಯ್ಕ , ಗಂಗಾನಾಯ್ಕ , ವಾಲ್ಯಾನಾಯ್ಕ ,ಸುರೇಶನಾಯ್ಕ, ಶೀನಾನಾಯ್ಕ ಬಂದಿರಲಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

(ತೆರೆದನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆ ಬೆರಳಚ್ಚು ಮಾಡಲಾಯಿತು. )

ಓ.ಹೇ.ಕೇ.ಸರಿ.ಇದೆ.

2 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ .ಎಂ.ಎಫ್.ಸಿ. ಶಿಕಾರಿಪುರ.